ಹಟ್ಟಿಗರು ನಡೆದುಕೊಳ್ಳುವುದಕ್ಕೂ ಈಗ ನಡೆದುಕೊಳ್ಳುತ್ತಿರುವುದಕ್ಕೂ ವ್ಯತ್ಯಾಸವಿರುವುದನ್ನು ಗುರುತಿಸಿಕೊಂಡಿದ್ದರು. ತಂದೆ ಪಂಚೇಗೌಡರ ಕಾಲದಲ್ಲಿ ಇಡೀ ಊರಿಗೇ ಪಂಚೆ ತೊಡುತ್ತಿದ್ದುದು ಮುದ್ದೇಗೌಡರೇ ಆಗಿದ್ದು, ಆ ಕಾರಣಕ್ಕೆ ಅವರ ಹೆಸರಿನಲ್ಲಿದ್ದ ಮುದ್ದೆ ಅಳಿಸಿ ಹೋಗಿ ಪಂಚೇಗೌಡರೆಂಬುದಕ್ಕೆ ನಿಂತಿತ್ತು. ಇನ್ನುಳಿದ ಹಟ್ಟಿಗರು ಪಂಚೇಗೌಡರನ್ನ ದೂರದಲ್ಲಿ ನೋಡಿದರೂ ನಡು ಬಗ್ಗಿಸಿ ಕೈಜೋಡಿಸಿ ದೂರ ಸರಿದುಬಿಡುತ್ತಿದ್ದರು. ಆದರೆ, ಅಂಥ ಪಂಚೇಗೌಡರ ಮಗನಾದ ಮಂಜೇಗೌಡರ ಚೇರ್ಮನ್ ಗಿರಿಯ ಈ ಕಾಲದಲ್ಲಿ ಹಟ್ಟಿಗರು ದಿಢೀರನೆ ಎಷ್ಟೋ ಹೆಜ್ಜೆ ಮುಂದಕ್ಕೆ ನೆಗೆದಂತೆ ಚಡ್ಡಿ ಕಟ್ಟುತ್ತಿದ್ದವರು ಒಮ್ಮೆಲೆ ಪ್ಯಾಂಟ್‌ಗೆ ಶಿಫ್ಟ್ ಆಗಿದ್ದರು.

ಪಂಚೆಯೇ ಕಾಣದಿದ್ದ ಈ ಹಟ್ಟಿಗರು ಒಮ್ಮೆಲೆ ಪ್ಯಾಂಟ್‌ಗೆ ನೆಗೆಯಬೇಕೆಂದರೆ!

ಕಳೆದ ಎರಡು ಮೂರು ವರ್ಷಗಳಿಂದ ಬೆಂಕಿಪುರ ಕಾಲೋನಿಗೆ ಫಾಸ್ಟರ್ ಹ್ಯಾರಿ ದಂಪತಿ ಬರಲು ಶುರು ಮಾಡಿದ್ದರು. ಫಾಸ್ಟರ್ ಹ್ಯಾರಿಯವರು ಏಕಾಏಕಿ ಹಟ್ಟಿಗೆ ಬಂದವರಲ್ಲ. ಈಗ್ಗೆ ನಲವತ್ತು ವರ್ಷಗಳ ಹಿಂದೆ ಇದೇ ಹಟ್ಟಿಯ ಅಂದಾನಿ ಈ ಊರಿಗೆ ಹೊಂದಿಕೊಂಡಂತಿದ್ದ ಗೊಲ್ಲರಟ್ಟಿಯ ಮಲ್ಲಿಗಮ್ಮಳೊಂದಿಗೆ ಓಡೋಗಿ ಧರ್ಮಸ್ಥಳದಲ್ಲಿ ತಾಳಿಕಟ್ಟಿಕೊಂಡು ಬಂದು ಬೆಂಗಳೂರಿನಲ್ಲಿ ಸಂಸಾರ ಮಾಡುತ್ತಿದ್ದ. ಅವರ ಪ್ರೇಮದ ಕಾಣಿಕೆಯೊಂದು ಸ್ಲೇಟು ಬಳಪ ಹಿಡಿದು ಶಾಲೆಗೆ ಹೋಗುವಂತಾದರೂ ಮಲ್ಲಿಗಮ್ಮಳ ತವರಿನವರಾಗಲೀ, ಅಂದಾನಿಯ ಹಟ್ಟಿಯವರಾಗಲೀ ಸತ್ತನಾ ಕೆಟ್ಟನಾ ಎಂದಿರಲಿಲ್ಲ. ಅವಳಿಗೆ ಜುಂಜಪ್ಪನಾಗಲೀ ಇವನಿಗೆ ನರಸಿಂಹಸ್ವಾಮಿಯಾಗಲೀ ಬೇಡವೆನಿಸಿ ಸಂಕಷ್ಟದಲ್ಲಿ ಸಾಂತ್ವನವಾಗಿ ಬಂದ ಬಿಲೀವರ್ಸ್ ಚರ್ಚಿನಲ್ಲಿ ಬ್ರದರ್ರೆ ಒಡಹುಟ್ಟಿದವರು, ಸಹ ಪ್ರಾರ್ಥನಾರ್ಥಿಗಳೇ ಹೆತ್ತು ಹೊತ್ತವರೆನಿಸಿ ಮಲ್ಲಿಗಮ್ಮ ತನ್ನ ಹಣೆಯಲ್ಲಿದ್ದ ಕುಂಕುಮ ಅಳಿಸಿ, ಅಂದಾನಿ ಕೊರಳಲ್ಲಿ ಶಿಲುಬೆ ಏರಿಸಿಕೊಂಡು ತಾನಾತು ತನ್ನ ಗಾರ್ಮೆಂಟ್ಸ್ ಕೆಲಸವಾಯಿತು ಎಂದುಕೊಂಡು ಸಂಸಾರ ನೂಕಿದರು. ಇದ್ದೊಬ್ಬ ಮಗಳು ಫೆರಾರಿಯನ್ನು ಓದಿಸಿದ್ದಕ್ಕೆ ಅವಳು ವೆಟರ್ನರಿ ಡಾಕ್ಟರ್ ಆದ ಪರಿಣಾಮ, ಮಗಳ ಸರ್ಕಾರಿ ನೌಕರಿಯ ಮೇರೆಗೆ ಸತತ ನಲವತ್ತು ವರ್ಷಗಳ ಅನಂತರ ಮತ್ತೆ ಊರ ದಿಕ್ಕಿಗೆ ತಲೆ ಹಾಕುವಂತಾಯಿತು. ಸತ್ರೂ ಆ ಊರಿಗೆ ಕಾಲಿಡಲ್ಲ ಎಂಬ ಸಂಕಲ್ಪದ ಅಡಿಯಲ್ಲಿ ಊರಿಗೆ ಹತ್ತಿರವಿದ್ದ ಐಬಿ ಕ್ರಾಸ್‌ನಲ್ಲಿ ಮನೆ ಲೀಜಿಗೆ ಹಿಡಿದು ಮಗಳ ಉದ್ಯೋಗ ದಕ್ಷತೆ ನೋಡಿಕೊಂಡು ಆನಂದವಾಗಿದ್ದರು.

ತಾವಿರುವ ಮನೆಯಲ್ಲೆ ಬೈಬಲ್ ಓದಿಗೆಂದು ವಿಶಾಲವಾದ ಹಾಲ್ ಬಿಟ್ಟುಕೊಂಡು ಬೆಳಗ್ಗೆ ಸಂಜೆ ತಪ್ಪದೆ 'ಆಮೆನ್' ಹೇಳುವರು. ಇಂಥದ್ದೇ ಸಂದರ್ಭದಲ್ಲಿ ಈಗ ಮೇರಿಯಾಗಿರುವ ಮಲ್ಲಿಗಮ್ಮ ತನ್ನ ಪೂರ್ವಾಶ್ರಮದ ಕಾಯಕವಾದ ಟೈಲರಿಂಗ್ ಅನ್ನು ಇಲ್ಲೂ ಮುಂದುವರೆಸಿರಲು, ಇವರ ಬಳಿ ಹೊಲಿಗೆ ಕಲಿಯಲು ಬರುವ ಹೆಣ್ಣುಮಕ್ಕಳ ಸಂಖ್ಯೆ ದಿನೇ ದಿನೆ ಹೆಚ್ಚುತ್ತಲೇ ಹೋಯಿತು.

ಬೆಂಕಿಪುರ ಕಾಲೋನಿಯ ಭದ್ರ ಒಂದು ದಿನ ಚೀಟಿಗೆ ಕಾಸು ಎಲ್ಲೂ ಹುಟ್ಟದೆ ಇರುವಾಗ ಹಳೆ ನಂಟನ್ನು ನೆನೆದು ಓಣಿಯಲ್ಲಿದ್ದ ಆಂಥೋನಿ ಉರುಫ್ ಅಂದಾನ್ಮಾಮನ ಮನೆ ಹುಡುಕಿಕೊಂಡು ಬಂದು, ಮಾವೊ ಇಂಗೆ ಯಡ್ವಟ್ಟು ಆಗೋಗ್ಬಿಟ್ಟೈತೆ ಏನಾರ ಮಾಡು ಮಾವೊ ಎಂದು ದುಂಬಾಲು ಬಿದ್ದ. ಕರಗಿದ ಅಂಥೋನಿ ಹಳೆಬೇರು ನೆನೆದು ಕೈಲಿದ್ದಷ್ಟು ಕೊಟ್ಟು 'ಆಮೆನ್' ಎಂದಿದ್ದ. ಇಲ್ಲಿ ನಡೆಯುತ್ತಿರುವ ಟೈಲರಿಂಗ್ ತರಬೇತಿಯನ್ನು ಅಂದೇ ನೋಡಿಕೊಂಡು ಹೋಗಿದ್ದ ಭದ್ರ ಅತ್ತ ಒಂದು ವಾರಕ್ಕೆ ಕೊಡಬೇಕಾದ ಹಣದ ಜೊತೆಗೆ ತನ್ನ ಹಾಗೂ ಪಕ್ಕದ ಮನೆಯ ಹೆಣ್ಣುಮಗಳನ್ನು ಜೋಡಿಯಾಗಿ ತಂದು ಹೊಲಿಗೆ ತರಬೇತಿ ಪಡೆಯಲು ನೇಮಿಸಿದ. ಅವು ವಾರ ಪೂರ್ತಿ ಬಂದು ಹೋಗುತ್ತ ಇರಲು ಒಂದೊಂದೆ ಜೊತೆಯಾಗಿ ಕಾಲೋನಿಯ ಇದ್ದ ಬದ್ದ ಹೆಣ್ಣುಮಕ್ಕಳೆಲ್ಲ

